ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಶ್ರೀ ರಾಮಪ್ರಸಾದ್ ಮತ್ತು ಮತ್ತೊಬ್ಬರು ವಿರುದ್ಧ ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು

ಅಪರಾಧ ಅರ್ಜಿಸಂಖ್ಯೆ: 3140/2016,ದಿನಾಂಕ: 11 ನೇ ಜನವರಿ, 2021.

ಆದೇಶ

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 498 ಎ ಪ್ರಕರಣದ ಮೇರೆಗೆ ಹಾಗೂ ವರದಕ್ಷಿಣೆ ನಿಷೇದ ಅಧಿನಿಯಮದ 3 ನೇ ಮತ್ತು 4 ನೇ ಪ್ರಕರಣಗಳ ಮೇರೆಗೆ ಶಿಕ್ಷಿಸಬಹುದಾದ ಅಪರಾಧಗಳಿಗೆ IX ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ಇವರಿಗೆ ಕಡತದಲ್ಲಿ ಬಾಕಿ ಇರುವ ಸಿ.ಸಿ.ಸಂ .8792/2015 ರಲ್ಲಿನ ಇಡೀ ಕ್ರಿಮಿನಲ್ ವ್ಯವಹರಣೆಗಳನ್ನು ರದ್ದುಪಡಿಸಲು ಕೋರಿ ಅರ್ಜಿದಾರರು/ಆಪಾದಿತರು 1 ಮತ್ತು 2 ಇವರು ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

2. 2 ನೇ ಮತ್ತು 3 ನೇ ಸಂಖ್ಯೆಯ ಅರ್ಜಿದಾರರು/ಆಪಾದಿತರ ಪರ ಮಾನ್ಯ ವಕೀಲರು ಮತ್ತು ಪ್ರತಿವಾದಿ ಸಂ .2/ದೂರುದಾರರ ಪರ ಮಾನ್ಯ ವಕೀಲರು ಮತ್ತು ರಾಜ್ಯದ ಪರ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಟರ್‌ವರ ವಾದಗಳನ್ನು ಆಲಿಸಿದ್ದೇನೆ.

ಇದರಲ್ಲಿ ಅರ್ಜಿದಾರರು/ಆಪಾದಿತರು ಸಂ .2 ಮತ್ತು 3 ಇವರು ಅನುಕ್ರಮವಾಗಿ ಎರಡನೆಯ ಪ್ರತಿವಾದಿ/ದೂರುದಾರರು ಅಂದರೆ ಶ್ರೀಮತಿ ಶೃತಿ ಅಂತಪ್ಪಾಳ್ ರವರ ಮಾವ ಹಾಗೂ ಅತ್ತೆಯಾಗಿರುತ್ತಾರೆ.

3. ಪ್ರಾಸಿಕ್ಯೂಷನ್ನು ಮೊಕದ್ದಮೆಯಿಂದ ತಿಳಿದು ಬರುವುದೇನೆಂದರೆ, ದೂರುದಾರ-ಶ್ರೀಮತಿ ಶೃತಿ ಅಂತಾಳ್, ಇವರಲ್ಲಿನ ಎರಡನೆಯ ಪ್ರತಿವಾದಿಯವರು, ತಾನು ಮುಕುಂದ್ ರಾಮಪ್ರಸಾದ್ ಎಂಬುವರನ್ನು ಮದುವೆಯಾದುದಾಗಿಯೂ ಹಾಗೂ ತಮ್ಮ ಸಮಾಜದಲ್ಲಿ ನಡೆದು ಬರುತ್ತಿರುವ ರೂಢಿಯ ಪ್ರಕಾರ ಬೆಂಗಳೂರಿನಲ್ಲಿ ದಿನಾಂಕ 30-11-2008 ರಂದು ಅವರ ಮದುವೆ ನೆರವೇರಿತು.ಮದುವೆಯಾದ ಕೂಡಲೇ ಅವರು ತನ್ನ ವೈವಾಹಿಕ ಮನೆಯಲ್ಲಿ ವಾಸಿಸತೊಡಗಿದರು.ಆದರೆ, ಮದುವೆಯ ನಂತರ ಆಕೆಯ ಪತಿ ಹಾಗೂ ಅತ್ತೆ-ಮಾವಂದಿಯರು ಆಕೆಗೆ ಕಿರುಕುಳ ಕೊಡಲಾರಂಭಿಸಿದರು ಹಾಗೂ ಸಹಿಸಲಾಗದ ಮಾನಸಿಕ ಹಿಂಸೆ ಉಂಟು ಮಾಡಿದರೆಂದು ಹೇಳಿದ್ದಾರೆ.ಮದುವೆಯ ಮಾತುಕತೆ ನಡೆದಾಗ ಯಾವುದೇ ವರದಕ್ಷಿಣೆ ಕೋರಿಕೆ ಸಲ್ಲಿಸದಿದ್ದರೂ, ಕ್ರಮೇಣ ಬದಲಾಗುತ್ತಾ ಹೋದರು ಹಾಗೂ ನಿಶ್ಚಿತಾರ್ಥ ಹಾಗೂ ಮದುವೆಗೆ ಮಾಡಬೇಕಾದ ಎಲ್ಲಾ ಖರ್ಚು ವೆಚ್ಚಗಳನ್ನು ಆಕೆಯ ತಂದೆ-ತಾಯಿಯವರೇ ಭರಿಸಬೇಕೆಂದು ತಗಾದೆ ಮಾಡಿದರು.ಮುಂದುವರೆದು, ಆಕೆಯ ತಂದೆ-ತಾಯಿಯವರು ನಿಶ್ಚಿತಾರ್ಥಕ್ಕೆ 1,00,000/-ರೂಪಾಯಿಗಳನ್ನು ಖರ್ಚುಮಾಡಿದರು ಎಂದು ಹೇಳಿದ್ದಾರೆ.ದೂರಿನಲ್ಲಿ ಹೇಳಿರುವುದೇನೆಂದರೆ, ಇದರಲ್ಲಿನ ಅರ್ಜಿದಾರರು/ಆಕೆಯ ಅತ್ತೆ-ಮಾವಂದಿರು, ಅವರು ಹೇಳಿದಂತೆಯೇ ಎಲ್ಲಾ ಆಗಬೇಕು ಎಂದು ತಗಾದೆ ಮಾಡಿದರು.ಹಾಗೂ ತನ್ನ ಮಗಳು ಅತ್ತೆ-ಮಾವಂದಿರ ಮನೆಯಲ್ಲಿ ಸಂತೋಷವಾಗಿರುತ್ತಾಳೆಂಬ ಮಹತ್ವಾಕಾಂಕ್ಷೆಯಿಂದ ಆಕೆಯ ತಂದೆ-ತಾಯಿಯವರು ಎಲ್ಲಾ ಬೇಡಿಕೆಗಳನ್ನು ಪೂರೈಸಿದರು.ಮದುವೆ ಹಾಲ್, ಆಭರಣಗಳು, ಅಲಂಕಾರ, ಸಾರಿಗೆ

ಇತ್ಯಾದಿ ಪೂರ್ತಿ ಮದುವೆ ಖರ್ಚಿಗೆ 15,00,000/-ರೂಪಾಯಿಗಳನ್ನು ಪ್ರತಿವಾದಿಯವರ ತಂದೆ-ತಾಯಿಯವರು ಭರಿಸಿದರು.ಮದುವೆಯಾದ ಕೂಡಲೇ ಎರಡನೆಯ ಅರ್ಜಿದಾರರು/ಆಪಾದಿತ ಸಂ .3 ಇವರು ಮನೆಗೆಲಸದವರನ್ನು ಬಿಡಿಸಿದರು ಮತ್ತು ಹಣ ಉಳಿತಾಯವಾಗುವುದರಿಂದ, ಮನೆಯ ಎಲ್ಲಾ ಕೆಲಸಗಳನ್ನು ಮಾಡುವಂತೆ ಎರಡನೆಯ ಪ್ರತಿವಾದಿಗೆ ಒತ್ತಡ ಹೇರಿದರು ಮತ್ತು ಮನೆಗೆಲಸವನ್ನೆಲ್ಲಾ ಮಾಡುವುದು ಸೊಸೆಯ ಕರ್ತವ್ಯ ಎಂದು ಹೇಳಿದರು.ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದ ಆಕೆಯು ಕೆಲಸವನ್ನು ಬಿಡಬೇಕೆಂದು ಸಹಾ ತಗಾದೆ ಮಾಡಿದರು.ಅದಕ್ಕೆ ಆಕೆಯು ನಿರಾಕರಿಸಿದರು, ಆಕೆಗೆ ಹಿಂಸೆ ಕೊಡುವುದಕ್ಕೆ ಅದೂ ಒಂದು ಕಾರಣ.ಮುಂದುವರೆದು ಅವರು ಆಕೆಯ ತಂದೆ ಮನೆಯಲ್ಲಿ ಮಗಳ ಪಾಲನ್ನು ಕೇಳು ಎಂದು ಬಲವಂತ ಮಾಡಲು ಪ್ರಾರಂಭಿಸಿದರು.ಅದಕ್ಕೆ ದೂರುದಾರರು ನಿರಾಕರಿಸಿದರು.ಆದರೆ, ಆಕೆ ಗಳಿಸಿ ಉಳಿಸಿರುವ ಹಣವನ್ನು ಅವರಿಗೆ ಕೊಡಬೇಕೆಂದು ಹಲವಾರು ಬಾರಿ ಒತ್ತಾಯ ಮಾಡಿದರು.ತದನುಸಾರವಾಗಿ ಆಕೆಯು ತನ್ನ ಪತಿ ಮುಕುಂದ್ ಹಾಗೂ ಅತ್ತೆ ಪದ್ಮಪ್ರಸಾದ್ಗೆ ಚೆಕ್ಗಳ ಮೂಲಕ ಸಾಕಷ್ಟು ಹಣವನ್ನು ನೀಡಿದ್ದು, ಅದನ್ನು ಆಕೆಯ ದೂರಿನ 7 ನೇ ಕಂಡಿಕೆಯಲ್ಲಿ, ಕೋಷ್ಠಕದ ಕಾಲಂನಲ್ಲಿ ವಿವರಿಸಲಾಗಿದೆ.ಆದರೆ, ಹಿಂಸಿಸುವಿಕೆ ಮುಂದುವರೆಯಿತೆಂದು ಹೇಳಲಾಗಿದೆ ಮತ್ತು ಆಪಾದಿತ ಸಂ .1 ಇವರು ತನ್ನ ಹಾಗೂ ತನ್ನ ಪತಿಯ ನಡುವೆ ನಡೆದ ಸಾರ್ವತ್ರಿಕ ಹಾಗೂ ಖಾಸಗಿ ಸಂವಾದವನ್ನು ಮತ್ತು ತಮ್ಮ ಮದುವೆಯ ಬಗ್ಗೆ ಹೊಸಬರೊಂದಿಗೆ ನಡೆಸಿದ ಸಂವಾದಗಳನ್ನು ಸಹ ದಾಖಲಿಸಿಕೊಂಡು, ಅದನ್ನು ನಂತರ ಅವರು ತನ್ನ ತಾಯಿಗೆ ತೋರಿಸುತ್ತಿದ್ದರು ಮತ್ತು ನಂತರ ವಕೀಲರೊಂದಿಗೆ ಸಮಾಲೋಚಿಸುತ್ತಿದ್ದರು, ಆಗ ಮುಕುಂದರವರೊಂದಿಗೆ ಶೃತಿ ಅಂತಾಳರವರ ಮದುವೆಯನ್ನು ಹೇಗೆ ಕೊನೆಗೊಳಿಸಬೇಕೆಂದು ಸಿದ್ಧಪಡಿಸುತ್ತಿದ್ದರು ಎಂದು ಆಪಾದಿಸಿದ್ದಾಳೆ.ಆಕೆಯ ದೂರು ಏಳು ಪುಟಗಳನ್ನು ಒಳಗೊಂಡಿದ್ದು, ಆಕೆಯ ದೂರಿನ ಕೊನೆಯ ಪುಟದಲ್ಲಿ ಆಕೆಯು ತನ್ನ ಕೈಬರಹದಲ್ಲಿ ನಿರ್ದಿಷ್ಟವಾಗಿ ಹೇಳಿರುವುದೇನೆಂದರೆ, ಆಪಾದಿತ ಸಂ .1 ಇವರು ತಮ್ಮ ನಡವಳಿಕೆಯನ್ನು ಬದಲಿಸಿಕೊಳ್ಳಬಹುದೆಂದು ಯೋಚಿಸುತ್ತಾ, ಆತನ ವಿರುದ್ಧ ಆಕೆಯ ದೂರು ಸಲ್ಲಿಸುವಲ್ಲಿ ವಿಳಂಬವಾಯಿತು.ಆತನಲ್ಲಿ ಯಾವುದೇ ಸುಧಾರಣೆ ಕಂಡು ಬಾರದಿದ್ದರಿಂದ, ಆಕೆಯು ದೂರನ್ನು ಸಲ್ಲಿಸುತ್ತಿರುವುದಾಗಿ ಹೇಳಿದ್ದಾರೆ.ಆದ್ದರಿಂದ ಬೆಂಗಳೂರಿನ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ನೋಂದಾಯಿಸಲಾದ ಕ್ರೈಂ.ಸಂ .369/2013 ರಿಂದ ಉಂಟಾಗಿರುವ ಸಿ.ಸಿ. ಸಂ .8792/2015 ರಲ್ಲಿ ಅವರ ವಿರುದ್ಧ ಪೊಲೀಸರಿಂದ ದಾಖಲಿಸಲಾಗಿದೆಯೆಂದು ಹೇಳಲಾದ ಎಫ್ಐಆರ್ನಲ್ಲಿ ಕಂಡುಬರುವ ಅಪರಾಧಗಳ ಬಗ್ಗೆ ಅವಶ್ಯಕ ಕಾನೂನು ಕ್ರಮ ತೆಗೆದುಕೊಳ್ಳಲು ಅವರು ಬೆಂಗಳೂರಿನ ಜ್ಞಾನಭಾರತಿ ಪೊಲೀಸ್ ಠಾಣೆಯ ಠಾಣಾಧಿಕಾರಿಯವರನ್ನು ಕೋರಿದ್ದಾರೆ.ಶೃತಿ ಅಂತಾಳ್/ಪ್ರತಿವಾದಿ ಸಂ .2 ಸಲ್ಲಿಸಿದ ದೂರಿನಲ್ಲಿ ಈ ಎಲ್ಲಾ ಆಪಾದನೆಗಳನ್ನು ಮಾಡಿದ್ದಾರೆ.

4. ಸಿ.ಸಿ.ಸಂ .8792/2015 ಇದರಲ್ಲಿ ಆಪಾದಿತ ಸಂ .1 ಎ ೦ ಬುದಾಗಿ ಆರೋಪಿಸಲಾದ ಮುಕಂದರವರ ಪತ್ನಿ ಶೃತಿ ಅಂತಾಳ್ ರವರು ಸಲ್ಲಿಸಿದ ದೂರಿನಲ್ಲಿ ಮಾಡಲಾದ ಧೃಡೋಕ್ತಿಗಳ ಬಗ್ಗೆ ಅರ್ಜಿದಾರರ ಪರ ಮಾನ್ಯ ವಕೀಲರು ನನ್ನ ಗಮನ ಸೆಳೆದರು.ಎರಡನೆಯ ಪ್ರತಿವಾದಿ ತನ್ನ ದೂರಿನಲ್ಲಿ, ಆಕೆಯ ಪತಿ ಮತ್ತು ಆತನ ತಂದೆ-ತಾಯಿಯವರು ಮೊದಮೊದಲು ಯಾವುದೇ ವರದಕ್ಷಿಣೆ ಕೇಳದಿದ್ದರೂ, ಇದು ಕ್ರಮೇಣ ಬದಲಾಗಿ ಕೆಲವು ವಸ್ತುಗಳನ್ನು ವಿಶೇಷವಾಗಿ ನಿಶ್ಚಿತಾರ್ಥದ ಸ್ಥಳಕ್ಕೆ ಸಂಬಂಧಿಸಿದಂತೆ ತಗಾದೆ ಮಾಡಲು ಪ್ರಾರಂಭಿಸಿದರು.ಮತ್ತು ಪೂರ್ಣ ಖರ್ಚು ವೆಚ್ಚವನ್ನು ಆಕೆಯ ತಂದೆ-ತಾಯಿಯವರೇ ಭರಿಸಬೇಕೆಂದು ಸಹಾ ತಗಾದೆ ಮಾಡಿದರು.ತದನುಸಾರವಾಗಿ ನಿಶ್ಚಿತಾರ್ಥದ ಸಂದರ್ಭದಲ್ಲಿನ ಪೂರ್ತಿ ಖರ್ಚು 1,00,000/-ರೂಪಾಯಿಗಳನ್ನು

ಆಕೆಯ ತಂದೆ-ತಾಯಿಯವರು ಭರಿಸಿದರು.ಆಕೆಯ ಅತ್ತೆಯು, ಆಕೆಯ ತಂದೆ-ತಾಯಿಯವರ ಆಸ್ತಿಯಲ್ಲಿ ಪಾಲನ್ನು ಕೇಳಲು ಆಕೆಯನ್ನು ಒತ್ತಾಯ ಮಾಡುತ್ತಿದ್ದರೆಂದು ಹೇಳುವ ಆಕೆಯು ಬೆರಳಚ್ಚು ಮಾಡಿದ ದೂರಿನ 13 ನೇ ಕಂಡಿಕೆಯಲ್ಲಿ ಉಲ್ಲೇಖಿಸುವುದೂ ಸಹಾ ಸುಸಂಗತವೆನಿಸುತ್ತದೆ.ಆಕೆ ನಿರಾಕರಿಸಿದಾಗ, ಅವರು ಆಕೆಯನ್ನು ಹಿಂಸಿಸಿದರೆಂದು ಆಪಾದಿಸಲಾಗಿದೆ.ಆಕೆಯು ದೂರುದಾರರನ್ನು ಬೈಯುವಾಗಲೆಲ್ಲಾ ದೂರುದಾರರ ಪತಿಯು ಅವರ ತಾಯಿಯ ಜೊತೆ ಸೇರಿಕೊಳ್ಳುತ್ತಿದ್ದರು ಮತ್ತು ಆಕೆಗೆ ಹಿಂಸೆ ಕೊಡುತ್ತಿದ್ದರು.ಆದರೆ, ಆಕೆಯು ಸಲ್ಲಿಸಿದ ಪ್ರಸ್ತುತ ದೂರಿಗೆ ಮೊದಲು ಈ ಅರ್ಜಿಯಲ್ಲಿ ಪ್ರತಿವಾದಿ ಸಂ .2 ಎ ಂ ಬುದಾಗಿ ಆರೋಪಿಸಲಾದ ಈ ಶೃತಿ ಅಂತಾಳವರು ದೂರನ್ನು ನೀಡುವ ಮೂಲಕ ಯಾವುದೇ ಅಪರಾಧ ನೋ ಂ ದಾಯಿಸಿಲ್ಲ.

ಈ ಆಪಾದನೆಗಳ ಬಗ್ಗೆ, ಅರ್ಜಿದಾರರ ಪರ ಮಾನ್ಯ ವಕೀಲರು ವಾದಿಸುವುದೇನೆಂದರೆ, ದೂರಿನ 7 ನೇ ಕಂಡಿಕೆಯಲ್ಲಿ ಕೈಬರಹದ ಹೇಳಿಕೆಯನ್ನು ಕಣ್ಣು ಹಾಯಿಸಿ ನೋಡಿದರೂ ಕಂಡುಬರುವುದೇನೆಂದರೆ, ಆತನ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲು ತನ್ನ ಪತಿ ಮುಕುಂದ್ ವಿರುದ್ಧ ಮಾತ್ರ ಆಪಾದನೆಗಳನ್ನು ಮಾಡಲಾಗಿದೆ.ಪೊಲೀಸರಿಂದ ದಾಖಲಿಸಲಾದುದೆಂದು ಹೇಳಲಾದ ಎಫ್ಐಆರ್ನಲ್ಲಿ ಕಂಡುಬರುವ ಅಪರಾಧಗಳಿಗಾಗಿ ಬೆಂಗಳೂರಿನ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ನೋಂದಾಯಿಸಲಾದ ಕ್ರೈಂ.ಸಂ.369/2013 ರಿಂದ ಉಂಟಾದ ಸಿ.ಸಿ.ಸಂ .8792/2015 ರಲ್ಲಿ ಆಪಾದಿತಸಂಖ್ಯೆ: 2 ಮತ್ತು 3 ಎಂಬುದಾಗಿ ಆಪಾದಿಸಲಾದ, ಆಕೆಯ ಅತ್ತೆ-ಮಾವಂದಿರ ಬಗ್ಗೆ ನಿರ್ದಿಷ್ಟವಾಗಿ ಹೇಳಲಾಗಿಲ್ಲ.

5. ಮುಂದುವರೆದು ವಾದಿಸುವುದೇನೆಂದರೆ, ಹಲವಾರು ಬಾರಿ ಮಾತುಕತೆ ನಡೆಸಿದ ನಂತರ ಹಿರಿಯರು ಹಾಗೂ ಹಿತೈಷಿಗಳು, ಈ ರೀತಿಯ ನೋವುಗಳಿಗೆ ಪ್ರಮುಖ ಕಾರಣ ಅತ್ತೆ-ಮಾವಂದಿರು ಎಂದು ಹೇಳಿ, ಪತಿ-ಪತ್ನಿ ಪ್ರತ್ಯೇಕ ಮನೆಯಲ್ಲಿ ವಾಸಿಸಲು ಸಲಹೆ ಮಾಡಿದರು ಮತ್ತು ಅವರು ಪ್ರತ್ಯೇಕ ಮನೆಯಲ್ಲಿ ವಾಸಿಸಲು ಪ್ರಾರಂಭಿಸಿದರೂ ಸಹಾ ಆಕೆಯ ಪತಿ ಮುಕುಂದ್ ಹಿಂಸೆ ನೀಡುವುದನ್ನು ನಿಲ್ಲಿಸಲಿಲ್ಲ ಮತ್ತು ಎರಡನೆಯ ಪ್ರತಿವಾದಿಯವರೊಂದಿಗೆ ಜಗಳ ಆಡುವುದಕ್ಕೆ ಪ್ರಾರಂಭಿಸಿದ್ದರು.ಅದನ್ನು ಆಕೆಯ ದೂರಿನ 18 ನೇ ಕಂಡಿಕೆಯಲ್ಲಿ ಹೇಳಿದ್ದಾಳೆ.ದಿನಾಂಕ 28-09-2013 ರಂದು ಈ ದೂರನ್ನು ಸಲ್ಲಿಸುವುದಕ್ಕೆ ಮೊದಲೂ ಸಹಾ ಆಪಾದಿತನ ವಿರುದ್ಧ ಅಪರಾಧ ದಾಖಲಿಸಲು ಅಧಿಕಾರ ಕ್ಷೇತ್ರ ಹೊಂದಿರುವ ಪೊಲೀಸರ ಮುಂದೆ ಯಾವುದೇ ಲಿಖಿತ ಅಥವಾ ಮೌಖಿಕ ದೂರನ್ನು ಆಕೆಯು ದಾಖಲಿಸಲಿಲ್ಲ.ಕ್ರೈಂ.ಸಂ .:369/2013 ರಿಂದ ಉಂಟಾಗುವ ಸಿ.ಸಿ.ಸಂ. 8792/2015 ರಲ್ಲಿ ಆಪಾದಿತರನ್ನಾಗಿ ತನ್ನ ಅತ್ತೆ-ಮಾವಂದಿರನ್ನು ಎಳೆದು ತರುವುದು ಮಾತ್ರವೇ ಆಕೆಯ ಕಾರ್ಯ ರೀತಿಯೇ ಅದು ಎಂದು ತೋರಿಸುತ್ತದೆ.ಇದೇ ಕಾರಣದಿಂದಲೇ ಅರ್ಜಿದಾರರು/ಆಪಾದಿತ ಸಂ .2 ಮತ್ತು 3 ಇವರ ವಿರುದ್ಧ ಕ್ರಿಮಿನಲ್ ನಡವಳಿಯನ್ನು ರದ್ದುಪಡಿಸಲು, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗೆ ಅಧಿಕಾರವನ್ನು ಚಲಾಯಿಸಬೇಕಾಗಿದೆ.

6. ಅರ್ಜಿದಾರರ ಪರ ಮಾನ್ಯ ವಕೀಲರು, ಈ ಕಾರಣಗಳಲ್ಲದೇ, ಎಂ.ಸಿ. ಸಂ. 33/2013 ರ 2 ನೇ ದಸ್ತಾವೇಜನ್ನು ಕೂಡಾ ಅವರು ಉಲ್ಲೇಖಿಸಿದ್ದಾರೆ.ಈ ಅರ್ಜಿಯನ್ನು ವಿಚ್ಛೇದನಕ್ಕಾಗಿ ಹಿಂದೂ ವಿವಾಹಗಳ ಅಧಿನಿಯಮದ 3 ( 1) ( 1ಎ) ಪ್ರಕರಣದ ಮೇರೆಗೆ ಶೃತಿ ಅಂತಾಳವರ ಪತಿಯಾದ ಮುಕುಂದ್ರವರು ಸಲ್ಲಿಸಿದ್ದಾರೆ.ಪ್ರತಿವಾದಿಯಿಂದ ಈ ನಿವೇದನೆಯನ್ನು ಮಾಡಲಾದ್ದರಿಂದ ಈ ಅರ್ಜಿಯನ್ನು ಹಿಂತೆಗೆದುಕೊಂಡಿದ್ದರೂ ಮುಕುಂದ್ ಮತ್ತು ಶೃತಿ

ಅಂತಪ್ಪಾಳ್ ನಡುವೆ ದಿನಾಂಕ 30-11-2018 ರಂದು ನಡೆದ ಆಕೆಯ ವಿವಾಹವನ್ನು ವಿಸರ್ಜಿಸಲು ಕೋರುವ ಅರ್ಜಿ ಇದಾಗಿದೆ ಎಂಬುದನ್ನು ಸಹಾ ಇದು ತೋರಿಸುತ್ತದೆ.

ಶ್ರೀಮತಿ ಶೃತಿ ಅಂತಪ್ಪಾಳರವರು ಹೆಣ್ಣು ಮಗುವಿಗೆ ಜನ್ಮನೀಡಿದ್ದು, ಆ ಮಗವು ಆಕೆಯ ತಾಯಿಯ ಆರೈಕೆ ಹಾಗೂ ರಕ್ಷಣೆಯಲ್ಲಿದೆ ಎಂದು ತಿಳಿಸುವ ಅವಶ್ಯಕತೆಯಿದೆ.ಆದರೆ, ಮುಕುಂದ್/ಆಪಾದಿತ ಸಂ .1 ಮತ್ತು ಮುಕುಂದ್ರವರ ಪತ್ನಿಯೇ ಆಗಿರುವ ಶೃತಿ ಅಂತಾಳರವರ ನಡುವೆ ಕುಟುಂಬ ವಿವಾದ ಉಂಟಾಗಿದೆ.ಆದರೆ, ಪತಿ ಮತ್ತು ಪತ್ನಿಯರ ನಡುವೆ ಉಂಟಾಗಿರುವ ಆಪಾದಿತ ಅಪರಾಧದಲ್ಲಿ ಪ್ರಸ್ತುತ ಅರ್ಜಿದಾರರುಗಳನ್ನು ಅನ್ಯಾಯವಾಗಿ ಅಸಂಬದ್ಧವಾಗಿ ಸೇರಿಸಲಾಗಿದ್ದು, ಅದು ಅರ್ಜಿದಾರರಿಗೆ/ಶೃತಿ ಅಂತಾಳ ಅತ್ತೆ-ಮಾವಂದರಿಗೆ ಮಾನಸಿಕ ಹಿಂಸೆಯನ್ನುಂಟುಮಾಡಿದೆ.ಅವರು ಭಾರತ ದಂಡ ಸಂಹಿತೆಯ 498 ಎ ಪ್ರಕರಣದ ಅಡಿಯಲ್ಲಿ, ಹಾಗೇಯೇ ವರದಕ್ಷಿಣೆ ನಿಷೇದ ಅಧಿನಿಯಮದ 3 ನೇ ಮತ್ತು 4 ನೇ ಪ್ರಕರಣಗಳ ಮೇರೆಗೆ ಸಹಾ ಅಪರಾಧವನ್ನೆಸಗಿದ್ದಾರೆಂಬ ಬಗ್ಗೆ ಅರ್ಜಿದಾರರ ಆಪಾದಿತ ಸಂ .2 ಮತ್ತು 3 ಇವರ ವಿರುದ್ಧ ಹೊರಿಸಬಹುದಾದ ಯಾವುದೇ ನಿರ್ದಿಷ್ಟ ಸ್ಪಷ್ಟ ಕೃತ್ಯವಿಲ್ಲ.ಸಿ.ಸಿ.ಸಂ. 8792/2015 ಇದರಲ್ಲಿ ಅವರ ಮಗ ಮುಕುಂದ್/ಆಪಾದಿತ ಸಂ .1 ಇವರಿಂದ ದಾಖಲಿಸಲಾಗಿರುವ ವಿಚ್ಛೇದನ ಅರ್ಜಿಗೆ ದ್ವೇಷ ಸಾಧಿಸುವ ಉದ್ದೇಶದಿಂದ ಅರ್ಜಿದಾರರ ಮೇಲೆ ದೋಷಾರೋಪಣೆ ಮಾಡಿದ ಎರಡನೆಯ ಪ್ರತಿವಾದಿಯರಿಂದ ದೂರನ್ನು ದಾಖಲಿಸಲಾಗಿದೆ.ದೂರಿನಲ್ಲಿ ಮಾಡಲಾಗಿರುವ ಆಪಾದನೆಗಳನ್ನು ನಿರಾಧಾರ ಮತ್ತು ಸುಳ್ಳು ಕ್ರಿಮಿನಲ್ ವ್ಯವಹರಣೆಗಳನ್ನು ಹೂಡುವ ಉದ್ದೇಶದಿಂದ ಸೃಷ್ಟಿಸಲಾಗಿದೆ ಎಂಬುದಾಗಿ ಯಾರೇ ವಿವೇಕವುಳ್ಳವರು ಊಹಿಸಬಹುದಾಗಿದೆ.

ಅವರು ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿದ್ದಾರೆಂದು ಮತ್ತು ಹಣವನ್ನು ಕೇಳುತ್ತಿದ್ದರೆಂಬ ಆಪಾದನೆ ಮಾಡಿ ಅವರನ್ನು ಸಿಕ್ಕಿಹಾಕಿಸುವ ಮೂಲಕ ಆಕೆಯ ಪತಿ ಹಾಗೂ ಆತನ ಕುಟುಂಬದ ಸದಸ್ಯರು ಹಿಂಸೆಕೊಡಲು ದೂರುದಾರರು ಅರ್ಜಿದಾರರುಗಳ ವಿರುದ್ಧ ವ್ಯವಹರಣೆಯನ್ನು ಹೂಡಿರುತ್ತಾರೆ.ದೂರಿನಲ್ಲಿ ಯಾವುದೇ ನಿರ್ದಿಷ್ಟ ಆಪಾದನೆ ಮಾಡಿರುವಾಗ, ಆಕೆಯಿಂದ ನೀಡಲಾದ ದೂರು ಅರ್ಜಿದಾರರಿಗೆ ಹಿಂಸೆ ನೀಡುವುದಕ್ಕಾಗಿ ಎಂಬುದಾಗಿ ನಿಶ್ಚಿತವಾಗಿಯೂ ಊಹಿಸಬಹುದು.ಅದು ಕಾನೂನಿನ ಪ್ರಕ್ರಿಯೆಯ ದುರುಪಯೋಗವಾಗುತ್ತದೆ.ಆದ್ದರಿಂದ ಈ ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸಿ, ಮಧ್ಯಪ್ರವೇಶಿಸಬೇಕಾಗುತ್ತದೆ.ಇಲ್ಲದಿದ್ದರೆ, ನಿಶ್ಚಿತವಾಗಿಯೂ ಆಪಾದಿತರ ದೂರಿಗೆ ಸಂಬಂಧಿಸಿದಂತೆ ನ್ಯಾಯದ ವಿಫಲತೆಯುಂಟಾಗುತ್ತದೆ.ಹಾಗೆಯೇ ಕಾನೂನಿನ ಪ್ರಕ್ರಿಯೆಯ ದುರುಪಯೋಗವಾಗುತ್ತದೆ.ಈ ಆಧಾರದಲ್ಲಿ ಅರ್ಜಿದಾರರ ಪರ ಮಾನ್ಯ ವಕೀಲರು, ಮಂಡಿಸಿರುವ ಕಾರಣಗಳನ್ನು ಪರಿಗಣಿಸಿ ಈ ಅರ್ಜಿಯನ್ನು ಪುರಸ್ಕರಿಸಲು ಕೋರುತ್ತಾರೆ.

7. ಪ್ರತಿವಾದಿ-ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯ ಸರ್ಕಾರಿ ಚ ಪ್ರಾಸಿಕ್ಯೂಟರ್ರವರು, ದೂರುದಾರರಿಂದ ಸಲ್ಲಿಸಲಾದ ಬೆರಳಚ್ಚು ಮಾಡಿದ ದೂರಿನಲ್ಲಿ ಮಾಡಲಾದ ಆಪಾದನೆಗಳ ಬಗ್ಗೆ ನಮ್ಮ ಗಮನ ಸೆಳೆದಿದ್ದು, ಅದು ಏಳು ಪುಟಗಳಷ್ಟಿದೆ.ದೂರಿನ 4 ನೇ ಕಂಡಿಕೆಯಲ್ಲಿ ಮದುವೆಯ ಸಂದರ್ಭದಲ್ಲಿ, ಎರಡನೆಯ ಪ್ರತಿವಾದಿಯು ತಂದೆ-ತಾಯಿಯವರು, ಸದರಿ ಕಂಡಿಕೆಯಲ್ಲಿ ದೂರುದಾರರು ಒದಗಿಸಿದ ಪಟ್ಟಿಯಲ್ಲಿ ವಿವರಿಸಿರುವಂತೆ ಹಲವಾರು ವಸ್ತುಗಳನ್ನು ನೀಡಿರುವುದು ಕಂಡುಬರುತ್ತದೆ.ಅವರ ಮದುವೆಯ ನಂತರ ಎರಡನೆಯ ಪ್ರತಿವಾದಿಯವರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ ಮತ್ತು ಅರ್ಜಿದಾರರುಗಳು

ಗಂಡುಮಗುವನ್ನು ನಿರೀಕ್ಷಿಸುತ್ತಿದ್ದುದರಿಂದ, ಅವರು ಎರಡನೆಯ ಪ್ರತಿವಾದಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದಾರೆ.ಆಕೆಯ ದೂರಿನ ಪ್ರಕಾರ, ಇದರಲ್ಲಿನ ಅರ್ಜಿದಾರರು, ಆಕೆಯ ತಂದೆಯ ಸ್ವತ್ತಿನಲ್ಲಿ ಪಾಲು ಕೇಳಲು ಅವರನ್ನು ಬಲಾತ್ಕರಿಸಿದ್ದಾರೆ ಮತ್ತು ಎರಡನೆಯ ಪ್ರತಿವಾದಿಯು ಗಳಿಸುತ್ತಿದ್ದುದರಿಂದ, ಅವರಿಗೆ ಹಣ ನೀಡುವಂತೆ ಹಲವಾರು ಬಾರಿ ಒತ್ತಾಯ ಮಾಡಿರುತ್ತಾರೆ.

ಆದ್ದರಿಂದ, ರಾಜ್ಯದ ಪರ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಚ ಪ್ರಾಸಿಕ್ಯೂಟರ್ರವರು ವಾದಿಸುವುದೇನೆಂದರೆ, ಮೇಲಿನ ವಾಸ್ತವಾಂಶಗಳ ದೃಷ್ಟಿಯಿಂದ ದೂರುದಾರರು ಸಲ್ಲಿಸಿದ ದೂರಿನಲ್ಲಿ ಪ್ರಸ್ತುತ ಅರ್ಜಿದಾರರ/ಅತ್ತೆ-ಮಾವಂದಿರ ವಿರುದ್ಧ ದೋಷಾರೋಪಣೆ ಮಾಡಲಾಗಿದೆ.ದೂರಿನಲ್ಲಿ ಮಾಡಲಾದ ಆಪಾದನೆಗಳನ್ನು ಪ್ರಾಸಿಕ್ಯೂಷನ್‌ವರ ಕಡೆಯಿಂದ ವಿಚಾರಿಸುವ ಅಗತ್ಯತೆಯಿದೆ ಮತ್ತು ಅಪರಾಧ ಎಸಗುವಲ್ಲಿ ಆಪಾದಿತರ ವಿರುದ್ಧ ಮೇಲ್ನೋಟಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂಬ ನಿರ್ಣಯಕ್ಕೆ ಬರಲು ಪಾಟೀಸವಾಲಿಗೆ ಕೂಡ ಒಳಪಡಿಸಬೇಕಾಗುತ್ತದೆ.ಅದರ ಪರಿಣಾಮವಾಗಿ, ಅರ್ಜಿದಾರರುಗಳ ವಿರುದ್ಧವು ಸಿ.ಸಿ.ಸಂ .8792/2015 ನ್ನು ದಾಖಲಿಸಲಾಗಿದೆ.ಮತ್ತು ಹಾಗಾಗಿ ಅರ್ಜಿದಾರರು/ಆಪಾದಿತರ ಸಂ .2 ಮತ್ತು 3 ಇವರು IX ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಇವರ ಕಡತದಲ್ಲಿ ಬಾಕಿ ಇರುವ ಮೇಲ್ಕಂಡ ಮೊಕದ್ದಮೆಯಲ್ಲಿ ವಿಚಾರಣೆ ಎದುರಿಸುವ ಅವಶ್ಯಕತೆಯಿದೆ ಎಂದು ವಾದಿಸಿದ್ದಾರೆ.ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಟರ್ರವರು ಈ ಎಲ್ಲಾ ವಾದಗಳನ್ನು ಮಂಡಿಸಿ, ಆರೋಪಿತರು ಸಲ್ಲಿಸಿರುವ ಅರ್ಜಿಯನ್ನು ವಜಾಮಾಡಲು ಕೋರಿದ್ದಾರೆ.

8. ಅರ್ಜಿದಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದ ಹಾಗೇಯೇ ಪ್ರತಿವಾದಿ ರಾಜ್ಯದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ರಾಸಿಕ್ಯೂಟರ್ ರವರು ಮಾಡಿದ ಎದುರು ವಾದದ ಹಿನ್ನೆಲೆಯಲ್ಲಿ ಎರಡನೆಯ ಪ್ರತಿವಾದಿ/ಶೃತಿ ಅಂತಾಳ್ ಇವರು ಸಿ.ಸಿ.ಸಂ .8792/2015 ಇದರಲ್ಲಿನ ಮುಕುಂದ್ ಮೊದಲನೆಯ ಆಪಾದಿತ ಇವರ ಪತ್ನಿಯಾಗಿ ಇದರಲ್ಲಿನ ಅರ್ಜಿದಾರ ಸಂ .1 ಮಾವ ಶ್ರೀ ರಾಮಪ್ರಸಾದ್ ಹಾಗೂ ಇದರಲ್ಲಿನ ಅತ್ತೆ ಶ್ರೀಮತಿ ಪದ್ಮ ರಾಮಪ್ರಸಾದ್/ಅರ್ಜಿದಾರರು ಸಂ .2 ಇವರ ವಿರುದ್ಧ ದೂರನ್ನು ನೀಡಿದ್ದಾರೆಂಬುದನ್ನು ಇಲ್ಲಿ ಉಲ್ಲೇಖಿಸುವುದು ಅವಶ್ಯವಿದೆ.ಸದರಿ ದೂರಿನಲ್ಲಿ ಆಕೆಯು ಪತಿ ಹಾಗೂ ಆಕೆಯ ಅತ್ತೆ-ಮಾವಂದಿರು ದೈಹಿಕ ಮತ್ತು ಮಾನಸಿಕ ಹಿಂಸೆ ನೀಡಿದ್ದಾರೆಂದು ಹಾಗೂ ವರದಕ್ಷಿಣೆಗೆ ತಗಾದೆ ಮಾಡಿದ್ದಾರೆಂದು ಆಪಾದನೆ ಮಾಡಲಾಗಿದೆ.ಆದರೆ ಆಕೆಗೆ ಯಾವುದೇ ರೀತಿಯ ಹಿಂಸೆ ನೀಡಿದ್ದೇ ಆಗಿದ್ದಲ್ಲಿ, ಎರಡನೆಯ ಪ್ರತಿವಾದಿಯು ಮೊದಲೇ ದೂರು ದಾಖಲಿಸುತ್ತಿದ್ದರು.ಅವರು ತಮ್ಮ ಪತಿಯ ನಡವಳಿಕೆಯಿಂದ ವಿಚಲಿತರಾಗಿದ್ದರೂ ಹಾಗೂ ಮಾನಸಿಕ ಕಿರುಕುಳ ನೀಡಲು ದ್ವೇಷ ಸಾಧಿಸಲು ತಮ್ಮ ಮಾವ ಹಾಗೂ ತಮ್ಮ ಅತ್ತೆಯನ್ನು ಇದರಲ್ಲಿನ ಅರ್ಜಿದಾರರನ್ನು ತಮ್ಮ ದೂರಿನಲ್ಲಿ ಸೇರಿಸಿದ್ದಾರೆಂಬುದು ದೂರಿನಿಂದಲೇ ತಿಳಿದು ಬರುತ್ತದೆ.ಆದರೆ, ಭಾರತ ದಂಡ ಸಂಹಿತೆಯ 498 ಎ ಪ್ರಕರಣದ ಮೇರೆಗಿನ ಅಂಶಗಳನ್ನು ಅನ್ವಯಿಸಲು, ಪ್ರಸ್ತುತ ಅರ್ಜಿದಾರರಿಂದ ಯಾವುದೇ ರೀತಿಯ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿದ ಹಾಗೆ ಇಲ್ಲ. ಅಲ್ಲದೇ ದೂರುದಾರರು ತಮ್ಮ ದೂರಿನಲ್ಲಿ, ಇದರಲ್ಲಿನ ಅರ್ಜಿದಾರರು ವರದಕ್ಷಿಣೆಗೆ ತಗಾದೆ ಮಾಡಿದ್ದರೆಂದು ಹೇಳಿದ್ದರೂ ಸಹಾ, ಆ ಬಗ್ಗೆ ಯಾವುದೇ ಸಾಕ್ಷ್ಯಾಧಾರವನ್ನು ಹಾಜರುಪಡಿಸಿಲ್ಲ.ಸಮಾಜದಲ್ಲಿ ಅವರ ಹೆಸರನ್ನು ಕೆಡಿಸಲು ದೂರು ಹಾಗೂ ಎಫ್‌ಐಆರ್ ನಲ್ಲಿನ ಅಂಶಗಳಿಂದ ಕ್ರಿಮಿನಲ್ ನಡವಳಿಗಳಿಗೆ ಅರ್ಜಿದಾರರನ್ನು ಎಳೆದು ತರಲಾಗಿದೆಯೆಂದು ಊಹಿಸಬಹುದಾಗಿದೆ.ವಿಷಯ ಹೀಗಿರುವಾಗ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ಅಗತ್ಯತೆ ಇದೆಯೇ ಎಂಬ ಪ್ರಶ್ನೆ ಉದ್ಭವಿಸುತ್ತದೆ.

9. ಈ ಹಿನ್ನೆಲೆಯಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ವ್ಯಾಪ್ತಿಯನ್ನು ಉಲ್ಲೇಖಿಸುವುದು ಸುಸಂಗತವೆನಿಸುತ್ತದೆ.ಇದರ ಪ್ರಕಾರ ನ್ಯಾಯಾಲಯದ ಪ್ರಕ್ರಿಯೆಯ ದುರುಪಯೋಗವನ್ನು ತಪ್ಪಿಸಲು ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣವನ್ನು ನ್ಯಾಯಿಕವಾಗಿ, ನ್ಯಾಯಯುತವಾಗಿ, ವಿರಳವಾಗಿ ಮತ್ತು ಎಚ್ಚರಿಕೆಯಿಂದ ಚಲಾಯಿಸಬೇಕಾಗುತ್ತದೆ ಮತ್ತು ಆಪಾದಿತರ ಆಪಾದನೆಗೆ ವಿರುದ್ಧವಾಗಿ ನ್ಯಾಯದ ವಿಫಲತೆಯಾಗತಕ್ಕದ್ದಲ್ಲ.ಆದರೆ, ದೂರು ಯಾವುದೇ ಅಪರಾಧವನ್ನು ಬಹಿರಂಗಪಡಿಸದಿರುವಾಗ ಅಥವಾ ದೂರು ಕ್ಷುಲ್ಲಕವಾಗಿರುವಾಗ ಹಾಗೂ ಕಿರುಕುಳಕಾರಿಯಾಗಿರುವಾಗ ಮಾತ್ರ ಮಧ್ಯಪ್ರವೇಶಿಸಲು ನ್ಯಾಯಸಮರ್ಥತೆ ಇರತಕ್ಕದ್ದು ಮತ್ತು ಮೊಕದ್ದಮೆಯಲ್ಲಿ ಸಾಕ್ಷ್ಯ ಎಂ ನಂಬಲರ್ಹವಾಗಿರಲಿ ಇಲ್ಲವೇ ನಂಬಲರ್ಹವಾಗದಿರಲಿ ತನಿಖೆಯ ಮೇಲೆ ಪ್ರಾರಂಭಿಸತಕ್ಕದ್ದಲ್ಲ.

10. ಪ್ರಸ್ತುತದ ಅರ್ಜಿಯಲ್ಲಿ, ಇದರಲ್ಲಿನ ಆಪಾದಿತ ಸಂ .2 ಮತ್ತು 3| ಅರ್ಜಿದಾರರಾಗಿರುವವರ ಸೊಸೆಯಾದ ಶೃತಿ ಅಂತಾಳ್ ರವರೇ ದೂರನ್ನು ದಾಖಲಿಸಿರುತ್ತಾರೆ.ಆಕೆಯ ಮದುವೆಯ ಮಾತುಕತೆಯ ಸಮಯದಲ್ಲಿ ಅರ್ಜಿದಾರರು ವರದಕ್ಷಿಣೆಗೆ ತಗಾದೆ ಮಾಡಿದರೆಂದು ನಿರ್ದಿಷ್ಟವಾಗಿ ತಿಳಿಸಿ.ಆಕೆಯ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಬೆರಳಚ್ಚು ಮಾಡಿದ ದೂರನ್ನು ದಾಖಲಿಸಿದ್ದಾರೆ.ಆದರೆ ಆಕೆಯ ದೂರಿನ 7 ನೇ ಪುಟದಲ್ಲಿ, ತನ್ನದೇ ಆದ ಕೈಬರಹದಲ್ಲಿ, ಅವರು (ತನ್ನ ಪತಿ ಮುಕುಂದ) ತಮ್ಮ ನಡವಳಿಕೆಯನ್ನು ಬದಲಿಸಿಕೊಳ್ಳಬಹುದೆಂದು ಯೋಚಿಸಿ ಆತನ ವಿರುದ್ಧ ತಡವಾಗಿ ದೂರನ್ನು ದಾಖಲಿಸುತ್ತಿರುವುದಾಗಿ ನಿರ್ದಿಷ್ಟವಾಗಿ ಹೇಳಿದ್ದಾರೆ.ಆದರೆ, ಆತನ (ತನ್ನ ಪತಿಯ) ನಡುವಳಿಕೆಯಲ್ಲಿ ಯಾವುದೇ ಸುಧಾರಣೆ ಆಕೆಗೆ ಕಂಡುಬರದಿದ್ದುದರಿಂದ ಆಕೆಯು ಅವರ ವಿರುದ್ಧ ಅವಶ್ಯಕ ಕಾನೂನು ಕ್ರಮವನ್ನು ತೆಗೆದುಕೊಳ್ಳಲು ಪೊಲೀಸರನ್ನು ಕೋರಿದ್ದಾರೆ.

ಆದ್ದರಿಂದ, ಅವರು ತಮ್ಮ ಪತಿಯ ನಡವಳಿಕೆಯಿಂದ ಬಹಳ ವಿಚಲಿತರಾಗಿದ್ದರು ಹಾಗೂ ಅದರಿಂದಾಗಿಯೇ ಅವರು ತನ್ನ ಪತಿ ಹಾಗೆಯೇ ಆಕೆಯ ಅತ್ತೆ-ಮಾವಂದಿರ ವಿರುದ್ಧ ದೂರನ್ನು ಸಲ್ಲಿಸಿದ್ದಾರೆಂದು ಕಂಡುಬರುತ್ತದೆ.ತನ್ನ ಮಾವ ಹಾಗೂ ಅತ್ತೆಯನ್ನು ಆಪಾದಿತರನ್ನಾಗಿ ಆಪಾದಿಸಿ ದೂರನ್ನು ದಾಖಲಿಸುವ ಮೂಲಕ ಆಕೆಯು, ತನ್ನ ಪತಿ ಮುಕುಂದ್ ವಿರುದ್ಧ ದ್ವೇಷ ಸಾಧಿಸಲು ಹೊರಟಿದ್ದಾರೆ.

11. ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗೆ ವ್ಯಾಪ್ತಿಯನ್ನು ಉಲ್ಲೇಖಿಸುವುದು ಸುಸಂಗತವೆನಿಸುತ್ತದೆ.ಅಂತಹ ಅಧಿಕಾರವನ್ನು ಚಲಾಯಿಸುವಾಗ, ಉಚ್ಚ ನ್ಯಾಯಾಲಯವು, ಪ್ರಶ್ನಿತ ಸಾಕ್ಷ್ಯವು ನಂಬಲರ್ಹವೆ ಅಥವಾ ಇಲ್ಲವೇ ಚ ಎಂಬುದರ ಮೇಲೆ ಸಾಮಾನ್ಯವಾಗಿ ಆಧರಿಸುವುದಿಲ್ಲ.ಅದು ಅಧಿವಿಚಾರಣಾ ನ್ಯಾಯಾಲಯದ ಪ್ರಕಾರ್ಯವಾಗಿರುತ್ತದೆ.ಆದರೆ, 482 ನೇ ಪ್ರಕರಣದ ಮೇರೆಗೆ ಅಂತರ್ನಿಹಿತ ಅಧಿಕಾರಕ್ಷೇತ್ರವನ್ನು ಬಹಳ ವಿರಳವಾಗಿ, ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಚಲಾಯಿಸಬೇಕು ಮತ್ತು ಆಗ ಮಾತ್ರ ಅಂತಹ ಚಲಾಯಿಸುವಿಕೆಯು, ಪ್ರಕರಣದಿಂದಲೇ ನಿರ್ದಿಷ್ಟವಾಗಿ ವಿಧಿಸಲಾಗಿರುವ ವಿಚಾರಣೆಗಳಿಂದ ಸಮರ್ಥನೀಯವಾಗುತ್ತದೆ.ಅದನ್ನು ಮೋನಿಕಾ ಕುಮಾರ್ -ವಿರುದ್ಧ-ಯುಪಿ ರಾಜ್ಯ ಎಐಆರ್ 1977 ಎಸ್‌ಆರ್ 1489 658, ಇವರ ಮೊಕದ್ದಮೆಯಲ್ಲಿ ಉಲ್ಲೇಖಿಸಲಾಗಿದೆ. ಕಕ್ಷಿದಾರರಿಗೆ ಬೇರೆ ಯಾವುದೇ ಪರಿಹಾರ ಲಭ್ಯವಿಲ್ಲದಿದ್ದಾಗ ಮತ್ತು ಪರಿನಿಯಮದಿಂದ ವಿವಿಧ ನಿರ್ದಿಷ್ಟ ಪರಿಹಾರಗಳನ್ನು ಉಪಬಂಧಿಸಿಲ್ಲದಾಗ ಮಾತ್ರ ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗೆ ನ್ಯಾಯಾಲಯದ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸಬೇಕೆಂದು ಇತ್ಯರ್ಥವಾಗಿರುವ ವಿಷಯವಾಗಿದೆ.ಅಷ್ಟೇ ಅಲ್ಲದೆ, ಅಧಿಕಾರವು ಅಸಾಧಾರಣವಾದದ್ದು, ಅದನ್ನು ಮಿತವಾಗಿ ಬಳಸಬೇಕಾಗುತ್ತದೆ.ಹಾಗೂ ಮುಂದುವರೆದು,

ಯಾವುದೇ ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಂಡಿದ್ದಾಗ ಮಾತ್ರ ವ್ಯವಹರಣೆಗಳನ್ನು ರದ್ದು ಮಾಡುವಾಗ, ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಮೇರೆಗೆ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸತಕ್ಕದ್ದು.

12. ಅಲ್ಲದೆ, ಕರ್ನಾಟಕ ರಾಜ್ಯ -ವಿರುದ್ಧ-ಎಲ್.ಮುನಿಸ್ವಾಮಿ ಮತ್ತು ಇತರರು, ಈ ಮೊಕದ್ದಮೆಯಲ್ಲಿ ಘನತೆವೆತ್ತ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಉಲ್ಲೇಖಿಸುವುದು ಮತ್ತಷ್ಟು ಸುಸಂಗತವೆನಿಸುತ್ತದೆ.ಅದರಲ್ಲಿ ತನ್ನ ವಿವೇಚನಾಯುಕ್ತ ಅಧಿಕಾರವನ್ನು ಚಲಾಯಿಸುವಾಗ, ಉಚ್ಚ ನ್ಯಾಯಾಲಯವು, ಕಾನೂನು ಕ್ರಮಗಳನ್ನು ಚ ಮುಂದುವರೆಯಲು ಅನುಮತಿಸಿದಲ್ಲಿ, ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗಪಡಿಸಿ ಕೊಂಡಂತಾಗುತ್ತದೆಂದು ಅಥವಾ ನ್ಯಾಯೋದ್ದೇಶ ಸಾಧನೆಗಾಗಿ ವ್ಯವಹರಣೆಗಳನ್ನು ರದ್ದುಪಡಿಸುವುದು ಅವಶ್ಯಕವೆಂಬ ನಿರ್ಣಯಕ್ಕೆ ಬಂದಲ್ಲಿ, ಉಚ್ಚ ನ್ಯಾಯಾಲಯದ ವ್ಯವಹರಣೆಗಳನ್ನು ರದ್ದುಪಡಿಸಲು ಹಕ್ಕುಳ್ಳದ್ದಾಗಿರುತ್ತದೆ.ಚ ಸಿವಿಲ್ ಹಾಗೂ ಕ್ರಿಮಿನಲ್ ವಿಷಯಗಳೆರಡರಲ್ಲಿಯೂ, ಅಂತರ್ನಿಹಿತ ಅಧಿಕಾರಗಳ ಉಳಿಸುವಿಕೆಯನ್ನು ನ್ಯಾಯಾಲಯದ ವ್ಯವಹರಣೆಗಳೆರಡರಲ್ಲಿಯೂ, ನ್ಯಾಯಾಲಯದ ವ್ಯವಹರಣೆಗಳನ್ನು ಪೀಡಿಸುವ ಅಥವಾ ಹಿಂಸಿಸುವ ಅಸ್ತ್ರವಾಗಿ ಬಳಸುವುದಕ್ಕೆ ಇಳಿಯದಂತೆ ಶಾಸನಾತ್ಮಕ ಸಾರ್ವತ್ರಿಕ ಉದ್ದೇಶವನ್ನು ಸಾಧಿಸಲು ಉಚ್ಚ ನ್ಯಾಯಾಲಯದ ಅಂತರ್ನಿಹಿತ ಅಧಿಕಾರಗಳ ಉಳಿಸುವಿಕೆಯನ್ನು ರೂಪಿಸಲಾಗಿದೆ.ಕ್ರಿಮಿನಲ್ ಮೊಕದ್ದಮೆಯಲ್ಲಿ, ಅಸಮರ್ಪಕವಾದ ಪ್ರಾಸಿಕ್ಯೂಷನ್ ಹಿಂದಿರುವ ಮುಸುಕು ಹಾಕಿದ ಗುರಿ, ಪ್ರಾಸಿಕ್ಯೂಷನ್ ಆಧರಿಸಿರುವ ಸಾಕ್ಷ್ಯಾಧಾರಗಳ ನೈಜ ಸ್ವಭಾವ ಮತ್ತು ಅಂತಹ ಅಂಶಗಳು, ನ್ಯಾಯಪಾಲನೆಯ ಹಿತಾಸಕ್ತಿಯಲ್ಲಿ ವ್ಯವಹರಣೆಗಳನ್ನು ರದ್ದುಪಡಿಸುವಲ್ಲಿ ಉಚ್ಚ ನ್ಯಾಯಾಲಯಕ್ಕೆ ಸಮರ್ಥನೆಯನ್ನು ಚ ನೀಡುತ್ತದೆ.

ಮುಂದುವರೆದು, ಭಾರತ ದಂಡ ಸಂಹಿತೆ, 1860 ರ 498 ಎ ಪ್ರಕರಣದ ಉಪಬಂಧದ ಅವಶ್ಯಕ ಅಂಶಗಳೆಂದರೆ, ಮಹಿಳೆಯು ವಿವಾಹವಾಗಿರಬೇಕು ಹಾಗೂ ಆಕೆಯನ್ನು ದೈಹಿಕವಾಗಿಯಾಗಲೀ ಅಥವಾ ಮಾನಸಿಕವಾಗಿಯಾಗಲೀ ಹಿಂಸೆಗೆ ಒಳಪಡಿಸಿರಬೇಕು.ಮಹಿಳೆಯು ವಿವಾಹಿತಳಾಗಿದ್ದಾಳೆಂಬ ಮಾತ್ರಕ್ಕೆ ಮತ್ತು ಪತ್ನಿಯು ತನ್ನ ಪತಿ ಹಾಗೂ ಅತ್ತೆ-ಮಾವಂದಿರ ವಿರುದ್ಧ ದೂರು ನೀಡಿದ್ದಾಳೆಂಬ ಮಾತ್ರಕ್ಕೆ ಸದರಿ ಅಪರಾಧ ಎಸಗುವಿಕೆಯನ್ನು ಒಳಗೊಳ್ಳುವುದರ ಮೇಲೆ ಹೇಳಲಾದ ಅಪರಾಧಗಳ ಅಂಶಗಳನ್ನು ಒಳಗೊಂಡಿದೆಯೆಂದು ನಿರ್ಣಯಿಸಲಾಗುವುದಿಲ್ಲ.ಭಾರತ ದಂಡ ಸಂಹಿತೆಯ 498 ನೇ ಪ್ರಕರಣದ ಮೇರೆಗೆ ಪರಿಭಾಷಿಸಲಾದ ಕ್ರೌರ್ಯವನ್ನು ಆ ವಿಷಯವನ್ನು ದೂರಿನಲ್ಲಿ ಹೇಳಲಾಗಿದ್ದರೂ ಸಹಾ ಸಾರಭೂತ ಪ್ರಮುಖ ಸಾಕ್ಷ್ಯದ ಮೂಲಕ ಮಾತ್ರ ಅದು ಸ್ಥಾಪಿತವಾಗುತ್ತದೆ.ಒಮ್ಮೆ ದೂರಿನಲ್ಲೂ ಇಲ್ಲದಿದ್ದಾಗ ಅಥವಾ, ಪೊಲೀಸರು ದಾಖಲಿಸಿದರೆಂದು ಹೇಳಲಾದ ಎಫ್ಐಆರ್‌ನಲ್ಲಿ ಕಂಡುಬರದಿದ್ದಲ್ಲಿ, ಆಗ ಭಾರತ ದಂಡ ಸಂಹಿತೆಯ 498 ನೇ ಪ್ರಕರಣದ ಮೇರೆಗೆ ಆಪಾದಿತರ ವಿರುದ್ಧ ಮುಂದುವರೆಯುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

13. ಈ ಪ್ರಸ್ತುತ ಮೊಕದ್ದಮೆಯಲ್ಲಿ, ಎಫ್ಐಆರ್ ಹಾಗೂ ದೂರಿನಲ್ಲಿ ಮಾಡಿರುವ ಆಪಾದನೆಗಳು ಎಷ್ಟರ ಮಟ್ಟಿಗೆ ಅಸಂಬದ್ಧ ಹಾಗೂ ಅತಾರ್ಕಿಕವಾಗಿವೆಯೆಂದರೆ, ಆಪಾದಿತ ಸಂ .2 ಮತ್ತು 3 ಎಂದು ಆಪಾದಿಸಲಾಗಿರುವ ಅರ್ಜಿದಾರರುಗಳ ವಿರುದ್ಧ ಮುಂದುವರೆಯಲು ಸಾಕಷ್ಟು ಕಾರಣಗಳಿವೆಯೆಂಬ ನಿರ್ಣಯಕ್ಕೆ ಬದಲಾಗುವುದಿಲ್ಲ ಹಾಗೂ ಆಕೆ ಹೂಡಿದ ಸದರಿ ವ್ಯವಹರಣೆಗಳು ಆಪಾದಿತರ ಮೇಲೆ ದ್ವೇಷ

ತೀರಿಸಿಕೊಳ್ಳದ ಹಾಗೂ ವೈಯಕ್ತಿಕ ದ್ವೇಷದ ಕಾರಣದಿಂದ ಅವರ ವಿರುದ್ಧ ದ್ವೇಷ ಸಾಧಿಸುವ ಗುಪ್ತ ಉದ್ದೇಶದ ದುರ್ಭಾವನೆಯಿಂದ ಕೂಡಿವೆ.

14. ಪ್ರಸ್ತುತ ಮೊಕದ್ದಮೆಯಲ್ಲಿ, ಆಪಾದನೆಗಳಿಗೆ ಪೂರಕವಾಗಿ ಕಲೆಹಾಕಲಾದ ಸಾಕ್ಷ್ಯವು ಅಪರಾಧ ಎಸಗಿರುವುದನ್ನು ಹೊರಗಡೆ ಹುವುದಿಲ್ಲ ಹಾಗೂ ಆಪಾದಿತ ಸಂ .2 ಮತ್ತು 3 ರವರು ಆಕೆಗೆ ದೈಹಿಕ ಮತ್ತು ಮಾನಸಿಕ ಹಿಂಸೆ ಮತ್ತು ವರದಕ್ಷಿಣೆಗೆ ಬೇಡಿಕೆ ಇಟ್ಟಿದ್ದಾರೆಂದು ಅವರ ವಿರುದ್ಧದ ಮೊಕದ್ದಮೆಯಿಂದ ಸಾಬೀತಾಗಿರುವುದಿಲ್ಲ.ಆದ್ದರಿಂದ ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದಂತೆ 498 ಎ ಪ್ರಕರಣದ ಅಡಿಯಲ್ಲಿ ಮತ್ತು ವರದಕ್ಷಿಣೆ ನಿಷೇದ ಅಧಿನಿಯಮ, 1961 ರ 3 ನೇ ಮತ್ತು 4 ನೇ ಪ್ರಕರಣಗಳ ಮೇರೆಗೆ ಶಿಕ್ಷಿಸಬಹುದಾದ ಅಪರಾಧಗಳಿಗಾಗಿ ಸಿ.ಸಿ.ಸಂ .8792/2015 ರಲ್ಲಿ ಆಪಾದಿತರ ವಿರುದ್ಧ ತನಿಖಾಧಿಕಾರಿಯು ಸಲ್ಲಿಸಿರುವ ಎಫ್ಐಆರ್ ಹಾಗೂ ದೋಷಾರೋಪಣ ಪಟ್ಟಿಯನ್ನು ರದ್ದುಪಡಿಸಲು ಯಾವುದೇ ಹಿಂಜರಿಕೆಯಿಲ್ಲ.ಮೇಲೆ ಹೇಳಲಾದ ಕಾರಣಗಳ ಹಾಗೂ ನಿರ್ಣಯಗಳ ಪ್ರಕಾರ ಈ ಮುಂದಿನ ಆದೇಶ ಹೊರಡಿಸಿದ್ದೇನೆ.

ಆದೇಶ

ಅರ್ಜಿದಾರರು/ಆಪಾದಿತ ಸಂ .2 ಮತ್ತು 3 ಇವರು ಸಲ್ಲಿಸಿದ ಕ್ರಿಮಿನಲ್ 0 ಅರ್ಜಿ ಸಂ .3140/2016 ನ್ನು ಈ ಮೂಲಕ ಪುರಸ್ಕರಿಸಲಾಗಿದೆ.ತದನುಸಾರವಾಗಿ ಪ್ರಸ್ತುತದ ಅರ್ಜಿದಾರರ/ಆಪಾದಿತ ಸಂ .2 ಮತ್ತು 3 ರ ಸಂಬಂಧದಲ್ಲಿ IX ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯವರು ಮುಂದೆ ಬಾಕಿ ಇರುವ ಕ್ರೈಂ.ಸಂ .369/2013 ರಿಂದ ಉದ್ಭವಿಸಿರುವ ಸಿ.ಸಿ.ಸಂ .8792/2015 ರಲ್ಲಿನ ವ್ಯವಹರಣೆಗಳನ್ನು ಈ ಮೂಲಕ ರದ್ದುಪಡಿಸಲಾಗಿದೆ.

ಈ ಆದೇಶದಲ್ಲಿ ಮಾಡಿರುವ ಯಾವ ಅಭಿಪ್ರಾಯೋಕ್ತಿಗಳು ಸಿ.ಸಿ.ಸಂ .8792/2015 ರಲ್ಲಿ ವಿಚಾರಣೆ ಎದುರಿಸುತ್ತಿರುವ ಆಪಾದಿತ ಸಂ .1/ಮುಕುಂದ್ರ ಬಗ್ಗೆ ಅಧಿವಿಚಾರಣಾ ನ್ಯಾಯಾಲಯದ ಮನಸ್ಸಿನ ಮೇಲೆ ಪ್ರಭಾವ ಹೊಂದಿರತಕ್ಕದ್ದಲ್ಲ.IX ನೇ ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರುರವರ ಮುಂದೆ ಬಾಕಿ ಇರುವ ಸದರಿ ಮೊಕದ್ದಮೆ ಸಿ.ಸಿ.ಸಂ .8792/2015, ಇದನ್ನು ಕಾನೂನಿಗೆ ಅನುಸಾರವಾಗಿ ಅರ್ಹತೆಯ ಮೇಲೆ ವಿಲೇ ಮಾಡಲು ನಿರ್ದೇಶಿಸಲಾಗಿದೆ.

ಮುಖ್ಯ ಅರ್ಜಿಯನ್ನು ವಿಲೇ ಮಾಡಿದ್ದರಿಂದಾಗಿ, ಐ.ಎ.ಸಂ .1/2020 ಇದು ಪರಿಗಣನೆಗಾಗಿ ಉಳಿಯುವುದಿಲ್ಲವಾದ್ದರಿಂದ ಅದನ್ನು ವಜಾ ಮಾಡಲಾಗಿದೆ.